ಅಧ್ಯಕ್ಷರು:– ಇದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಜಿಲ್ಲೆಯ ಮಂತ್ರಿಗಳು ಅಥವಾ ತಾವುಗಳು ಅಲ್ಲಿಗೆ ಹೋಗಿ ಭೇಟಿ ನೀಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ:– ತಮಗೆ ವಾಸ್ತವಾಂಶವನ್ನು ಹೇಳುತ್ತೇನೆ. ಮಾನ್ಯ ಫ್ಲೇಸಿಯಸ್ ಡಿಸೋಜರವರ ಬಗ್ಗೆ ನನಗೆ ಬಹಳ ಗೌರವ ಇದೆ. ನೀವು ದಯವಿಟ್ಟು ಹೇಳಿ.

ಅಧ್ಯಕ್ಷರು:– ಈ ರೀತಿಯಾದರೆ ಹೇಗೆ, ನಾನು ಹೇಳುವವರಿಗೆ ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈ ತರಹ ಸನ್ನಿವೇಶ ಇದೆ. ಈ ಸಭೆಯ ಸಮಯಾವಳಿಗಳಿಗೆ ನಾನು ಗೌರವವನ್ನು ಕೊಡುವವನು. ನಿಮ್ಮ ಸ್ಥಾನಕ್ಕೆ ಗೌರವ ಕೊಡುವವನು, ನಾನು ಬೆಳಿಗ್ಗೆ ನನ್ನ ವೇದನೆಗಳನ್ನು ವ್ಯಕ್ತಮಾಡಿದ್ದೇನೆ. ನಾನು ಕುಳಿತುಕೊಳ್ಳುತ್ತೇನೆ ಅಥವಾ ನಾನು ಹೊರಗಡೆಗೆ ಹೋಗುತ್ತೇನೆ. ನೀವು ಮಾತನಾಡುವುದಿಲ್ಲ ಎಂದು ಹೇಳಿದರೆ ಹೇಗೆ ? ನನಗೆ ನಿಮ್ಮ ಬಗ್ಗೆ ಬಹಳ ಗೌರವವಿದೆ. ಆದರೆ ವಿಷಯ ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶ ಇಲ್ಲ ಅಂದರೆ ನಾನು ಹೊರಗಡೆಗೆ ಹೋಗುತ್ತೇನೆ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ನಾನು ಕೊಟ್ಟಂತಹ ಹೇಳಿಕೆಯನ್ನು ತಾವು ಆಲಿಸಬೇಕು. ಪರಿಸ್ಥಿತಿ ಬಹಳ ಗಂಭೀರವಾಗಿದೆ ಜಿಲ್ಲೆಯ ಮಂತ್ರಿಗಳಾಗಲಿ ಅಥವಾ ಆರೋಗ್ಯ ಮಂತ್ರಿಗಳಾಗಲಿ ಸಮಕ್ಷಮ ಹೋಗಬೇಕೆಂದು ಹೇಳಿದೆ. ನಾನು ಹೇಳಿದ ಮೇಲೆ ಅರ್ಥ ಮಾಡಿಕೊಳ್ಳಬೇಕು. ನಾನು ಆದೇಶವನ್ನು ಕೊಟ್ಟಿದ್ದೇನೆ. ಸಂಬಂಧಪಟ್ಟ ಮಂತ್ರಿಗಳು ಅಥವಾ ಜಿಲ್ಲೆಯ ಮಂತ್ರಿಗಳು, ಆರೋಗ್ಯ ಮಂತ್ರಿಗಳು ಹೋಗಬೇಕೆಂದು. ಇದಕ್ಕಿಂತಲೂ ಹೆಚ್ಚಿನ ಗಾಂಭೀರ್ಯ ನಾನು ಏನು ಮಾಡುವುದಕ್ಕೆ ಆಗುತ್ತದೆ. ನನಗೆ ಮಾತನಾಡಲಿಕ್ಕೆ ಕೊಡಲಿಲ್ಲ ಏನು ಹೇಳಿದರೆ ಹೇಗೆ ? ಇದು ನನಗೆ ಅರ್ಥವಾಗುವುದಿಲ್ಲ. ತಾವು ದಯವಿಟ್ಟು ಗಮನಿಸಬೇಕು.

## ಮಂತ್ರಿಗಳ ಹೇಳಿಕೆ

ರಾಜ್ಯದಲ್ಲಿರುವ ಖಾಸಗೀ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಅನುದಾನ.

ಶ್ರೀ ಆರ್. ಪಿ. ನೇಶಪಾಂಡೆ:– ನಿನ್ನೆ ಶೂನ್ಯ ವೇಳೆಯಲ್ಲಿ ನಾವು ಕೇಳಿದ್ದೆವು. ಅವರು ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರ ಕೊಡುತ್ತೇವೆಂದು ಹೇಳಿದರು. ಉತ್ತರ ಕೊಡುವುದಕ್ಕೆ ಹೇಳಿ.

ಶ್ರೀ ಫ್ಲೇಸಿಯಸ್ ಎ. ಡಿಸೋಜ (ಸನ್ಮಾನ್ಯ ಕಾರ್ಮಿಕ ಸಚಿವರು):– ಮಾನ್ಯ ಅಧ್ಯಕ್ಷರೇ,

ರಾಜ್ಯದಲ್ಲಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವಂತೆ ಕರ್ನಾಟಕ ರಾಜ್ಯ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ನೌಕರರ ಸಂಘವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ.

ರಾಜ್ಯದಲ್ಲಿ ಪ್ರಸ್ತುತ 151 ಮಾನ್ಯತೆ ಪಡೆದಿರುವ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಕುಶಲಕರ್ಮಿ ತರಬೇತಿ ಕಾರ್ಯಕ್ರಮವನ್ನು ರಾಷ್ಟ್ರೀಯ ವೃತ್ತಿ ಪರಿಷತ್ತಿನ ನಿಯಮಗಳಿಗನುಸಾರವಾಗಿ ನಡೆಸುತ್ತಿವೆ. ಈ ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸರ್ಕಾರವು ಸದ್ಯ ಯಾವುದೇ ಅನುದಾನ ನೀಡುತ್ತಿಲ್ಲ.

ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಆಡಳಿತ ವರ್ಗ ಮತ್ತು ಶಿಕ್ಷಕ ಸಿಬ್ಬಂದಿ ವರ್ಗದವರೂ ಸರ್ಕಾರದ ಅನುದಾನಕ್ಕಾಗಿ ಒತ್ತಾಯಿಸುತ್ತಿದ್ದಾರೆ. ಈ ಅನುದಾನ ನೀಡುವ ವಿಚಾರವು ಸರ್ಕಾರಕ್ಕೆ ಯೋಜನೇತರ ವೆಚ್ಚದಡಿಯಲ್ಲಿ ಆರ್ಥಿಕ ಹೊರೆಯಾಗಿರುತ್ತದೆ. ರಾಜ್ಯ ಸರ್ಕಾರವು ಅಭಿವೃದ್ಧಿ

ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಉಪಯೋಗಿಸಬೇಕಾಗಿರುವುದರಿಂದ, ಯೋಜನೇತರ ವೆಚ್ಚಗಳನ್ನು ಮಿತಿಗೊಳಿಸುವುದು ರಾಜ್ಯ ಸರ್ಕಾರದ ನೀತಿಯಾಗಿರುತ್ತದೆ. ಇದಕ್ಕೆ ಸುಮಾರು 30 ಕೋಟಿ ರೂಪಾಯಿಗಳು ಅಗತ್ಯವಿರುವುದರಿಂದ, ಈ ಪ್ರಸ್ತಾವನೆಯು ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಬೇಕಾಗಿರುವುದು 5 ಕೋಟಿ ಸಾಕು. ಒಂದು ಮೀಟಿಂಗನ್ನು ಕರೆಯಿರಿ ನಾವು ಬಂದು ನಿಮಗೆ ಮನವರಿಕೆ ಮಾಡುವಂಥ ಪ್ರಯತ್ನ ಮಾಡುತ್ತೇವೆ. ಅವಕ್ಕೆ 5 ಕೋಟಿ ಸಾಕು. 30 ಕೋಟಿ ಅಲ್ಲ. ಸ್ಟೇಟ್‌ಮೆಂಟ್ ಮಾಡಿದ್ದೀರಿ ?

ಶ್ರೀ ಪ್ಲೇಸಿಮಸ್ ಎಂ. ಡಿಸೌಜ:– 30 ಕೋಟಿ ರೂಪಾಯಿಯ ವೆಚ್ಚವನ್ನು ನಮ್ಮ ಹಣಕಾಸು ಇಲಾಖೆಯವರು ಹೇಗೆ ತೋರಿಸಿದ್ದಾರೆ ಅಂದರೆ ನಮ್ಮಲ್ಲಿ ಈಗ 44 ಸರ್ಕಾರಿ ಐ.ಟಿ.ಐ.ಗಳು ಇವೆ. ಈ 44 ಐ.ಟಿ.ಐಗಳಿಗೆ 9ರಿಂದ 10 ಕೋಟಿ ರೂಪಾಯಿ ನಮಗೆ ವೆಚ್ಚವಾಗುತ್ತದೆ. ಸರ್ಕಾರೀ ಐ.ಟಿ.ಐಗಳನ್ನು ಹೇಗೆ ನಡೆಸಿಕೊಂಡು ಹೋಗುತ್ತೇವೆ ಅದೇ ರೀತಿಯಲ್ಲಿ ನಾವು ಇವುಗಳನ್ನು ಸಹ ನಡೆಸಿಕೊಂಡು ಹೋಗಬೇಕಾಗುತ್ತದೆ. ಅದೇ ರೀತಿಯಲ್ಲಿ ಸಪಲತ್ತುಗಳನ್ನು ಕೊಡಬೇಕಾದರೆ 30 ಕೋಟಿ ರೂಪಾಯಿ ಬೇಕಾಗುತ್ತದೆಂದು ಅವರು ನಮಗೆ ತಿಳಿಸಿದ್ದಾರೆ. ಆದರೆ ನಮ್ಮ ಮಾನ್ಯ ದೇಶಪಾಂಡೆಯವರು ಮತ್ತು ಇತರ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ, ಈಗ ಇರುವ 151 ಐ.ಟಿ.ಐ.ಗಳ ಅನುದಾನವನ್ನು ನಾವು ಬರೀ ಸಂಬಳಕ್ಕೆ ತಂದರೆ ಇದಕ್ಕೆ ಸ್ವಲ್ಪ ಖರ್ಚು ಕಡಿಮೆಯಾಗುತ್ತದೆ. ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಮಂತ್ರಿಗಳು 30 ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತಾರೆ. ದಯಮಾಡಿ ತಪ್ಪು ತಿಳಿದುಕೊಳ್ಳಬೇಡಿ. ಮೇಲಿನ ಮನೆಯಲ್ಲಿಯೂ ಸಹ ಉತ್ತರವನ್ನು ಕೊಡುವಾಗ 30 ಕೋಟಿ ಎಂದು ಹೇಳಿದ್ದೀರಿ. ನಾನು ನಿನ್ನೆ ಹೇಳುವಾಗ ತಾವು ಇರಲಿಲ್ಲ. 1 ಟ್ರೇಡ್‌ಗೆ ವರ್ಷಕ್ಕೆ 2 ಲಕ್ಷ ಖರ್ಚಾಗುತ್ತದೆ. ಪ್ರತಿಯೊಂದು ಐ.ಟಿ.ಐ.ಸಲ್ಲಿ 7 ಟ್ರೇಡ್‌ಗಳು ಇರುತ್ತವೆ. ಅದರ ಪ್ರಕಾರ ಲೆಕ್ಕ ಹಾಕಿದರೆ 7 ಕೋಟಿ ರೂಪಾಯಿ ಮೇಲೆ ನಿಮ್ಮ ಎಕ್ಸ್ ಪೆಂಡಿಚರ್ ಹೋಗುವುದಿಲ್ಲ. It will not be more than Rs. 7 crores. Secondly, you have to strengthen the Technical Education.

ಬಿ. ಏ., ಬಿ.ಕಾಂ ಗ್ರಾಜುಯೆಟ್ ಮಾಡುವುದಕ್ಕಿಂತ ನೀವು ಐ.ಟಿ.ಐ. ಹುಡುಗರನ್ನು ತಯಾರು ಮಾಡಿ ಟೆಕ್ನಿಕಲ್ ನಾಲೆಜ್ ಕೊಡಿ. ಹುಡುಗರು ಮುಂದೆ ಬರುತ್ತಾರೆ. ನಾನೇ ನಮ್ಮ ಕ್ಷೇತ್ರದಲ್ಲಿ ಐ.ಟಿ.ಐ. ಶುರು ಮಾಡಿದ್ದೇನೆ. ಎಷ್ಟು ಹುಡುಗರು ಐ.ಟಿ.ಐ. ಮಾಡಿದ್ದಾರೆ ಅವರಿಗೆಲ್ಲರಿಗೂ ಕೆಲಸ ಸಿಕ್ಕಿದೆ. ಹಾಗಾಗಿ ಇವತ್ತು ಸರ್ಕಾರ ಸಹ ತಮ್ಮ ಶಿಕ್ಷಣ ನೀತಿಯನ್ನು ಸ್ವಲ್ಪ ಬದಲಾವಣೆ ಮಾಡಬೇಕು. ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕಾಗುತ್ತದೆ. ಈ ಜನರಿಗೆಲ್ಲ ಅನುಭವ ಇದೆ. ಹಾಗಾಗಿ ಇದನ್ನು ತಾವು ಗಮನಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಎರಡನೆಯದು ತಮ್ಮ ಜೊತೆಯಲ್ಲಿಯೂ ಚರ್ಚೆ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿಯೂ ಸಹ ಚರ್ಚೆ ಮಾಡಿದ್ದೇನೆ. ಅವರೂ ಸಹ ಬಹಳ ಸಹಾನುಭೂತಿಯಿಂದ ಹೇಳಿದ್ದಾರೆ. ಹಾಗೆ ತಮ್ಮಲ್ಲಿ ರಿಕ್ವೆಸ್ಟ್ ಮಾಡುತ್ತೇನೆ. ತಾವು ಮೀಟಿಂಗ್ ಕರೆಯಿರಿ. ನಾವು ನಾಲ್ಕು ಜನ ಬರುತ್ತೇವೆ ಎಲ್ಲರೂ ಇದರ ಬಗ್ಗೆ ಚರ್ಚಿಸೋಣ ಯಾವ ಪ್ರಕಾರ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯ. ನಾವು ಏಲಹೆ ಕೊಡುತ್ತೇವೆ. ಅವರ ಜೊತೆ ವಿದ್ಯಾರ್ಥಿಗಳು ಸ್ಟ್ರೈಕ್ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಇದು ಸಾವಿರ ರೂಪಾಯಿಗಳನ್ನು ಕೊಡಬೇಕು ಎರಡು ವರ್ಷಗಳಿಗೆ, ಮತ್ತು ಅವರಿಗೆ ಸ್ಕೈಫಂಡ್ ಇಲ್ಲ. ಆದ್ದರಿಂದ ಅವರಿಗೆ ಫೀ ಕಡಿಮೆಯಾಗಬೇಕು, ಸ್ಕೈಪಂಡರಿ ಕೊಡುವ ವ್ಯವಸ್ಥೆ ಆಗಬೇಕು. ಇದನ್ನು ಇಲ್ಲಿ

ಸಮಗ್ರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಾವು ಮೀಟಿಂಗ್ ಕರೆದು ಚರ್ಚಿಸಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ತಾವು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾನೂ ಸಹ ಮಾಡಿದ್ದೆ. ಇದರ ಬಗ್ಗೆ ಸಾಕಷ್ಟು ಸಲ ಪ್ರಸ್ತಾಪ ಮಾಡಿದ್ದೆ. ತಾವು ಎಲ್ಲೂ ಉತ್ತರ ಕೊಟ್ಟಿದ್ದೀರಿ. ಸುಮಾರು 15 ಸಾವಿರ ವಿದ್ಯಾರ್ಥಿಗಳು ಇಲ್ಲಿ ಓದುತ್ತಿದ್ದಾರೆ. ನಾವು ಏನಂತಿ ಮಾಡುವಂತದ್ದು ಅವರ ಮನಸ್ಸಿನಲ್ಲಿ ಅಧಿಕಾರಿಗಳು ಕೊಟ್ಟಿರುವಂಥ ಲೆಕ್ಕದ ಪ್ರಕಾರ ಸನ್ಮಾನ್ಯ ಸಚಿವರಿಗೆ ಭಯವಾಗಿದೆ. ಸುಮಾರು ಮೂವತ್ತು ಕೋಟಿ ರೂಪಾಯಿಗಳು ಖರ್ಚು ಬರುತ್ತದೆ ಎಂಬ ಭಯದಲ್ಲಿ ಇದ್ದಾರೆ. ನೀವು ದಯಮಾಡಿ ನಮ್ಮೆಲ್ಲರನ್ನು ಕರೆಯಿರಿ. ಸನ್ಮಾನ್ಯ ಹಿರಿಯರಾದಂಥ ಎಸ್. ರಾಜಶೇಖರಮೂರ್ತಿಯವರಿಗೂ ಅದರ ತೊಂದರೆ ಗೊತ್ತಿದೆ. ಇದರ ಬಗ್ಗೆ ಎಲ್ಲಾ ಮಂತ್ರಿಗಳಿಗೂ ಗೊತ್ತಿದೆ. ಆ ಜಿಲ್ಲೆಯ ಮಕ್ಕಳು, ಶಿಕ್ಷಕರು ಬಂದಿದ್ದಾರೆ. ತಾಂತ್ರಿಕ ಶಿಕ್ಷಣವನ್ನು ಉಳಿಸಬೇಕಾಗಿದೆ. ದೇಶಪಾಂಡೆಯವರು ಹೇಳಿದಂತೆ ಡಿಗ್ರಿ ತೆಗೆದುಕೊಂಡು ಏನು ಮಾಡುವುದು ? ಐ.ಟಿ.ಐ. ಅದ ಮೇಲೆ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುತ್ತಾರೆ ಇದರಲ್ಲಿ ಸರ್ಕಾರದ ಕರ್ತವ್ಯವಿದೆ. ನಾಳೆ ಖಾಸಗಿಯವರು ಮಾಡುವುದಿಲ್ಲವೆಂದು ನಿಲ್ಲಿಸಿ ಬಿಟ್ಟರೆ ಸರ್ಕಾರವೇ ಪೂರ್ತಿ ಜವಾಬ್ದಾರಿಯನ್ನು ಹೊತ್ತುಕೊಂಡು ಐ.ಟಿ.ಐ. ನಡೆಸಬೇಕಾಗುತ್ತದೆ. ಅಂಥ ಪರಿಸ್ಥಿತಿ ಇರುವುದರಿಂದ ದಯಮಾಡಿ ಇದು 7–8 ಕೋಟಿ ರೂಪಾಯಿಗಳ ಮೇಲೆ ಬರುವುದಿಲ್ಲ. ಇಲ್ಲಿ ನಾವೇನೂ ಉತ್ತರ ಬಯಸುವುದಿಲ್ಲ. ನಾಳೆಯೇ ಇದಕ್ಕೆ ಸಂಬಂಧಪಟ್ಟ ಸಭೆಯನ್ನು ಕರೆಯಿರಿ. ನಿಮ್ಮನ್ನು ಕನ್ವಿನ್ಸ್ ಮಾಡುತ್ತೇವೆ. If it is less than ಆಗ. ನೀವು ಒಪ್ಪಿಕೊಳ್ಳಿ. ನಂತರ ಅನುದಾನ ಕೊಡುವುದಕ್ಕೆ ಪ್ರಾರಂಭ ಮಾಡಿ. ಅಷ್ಟೇ ನಾವು ನಿಮ್ಮಲ್ಲಿ ವಿನಂತಿ ಮಾಡುವುದು.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಶ್ರೀ ದೇಶಪಾಂಡೆಯವರು ಹೇಳಿದ ಹಾಗೆ ಸರಾಸರಿ ಎರಡು ಲಕ್ಷ ರೂಪಾಯಿಗಳು ಎಂದು ಲೆಕ್ಕ ಹಾಕಿದ್ದಾರೆ. ಒಂದೊಂದು ಸರ್ಕಾರಿ ಐ.ಟಿ.ಐ.ಯಲ್ಲಿ ಏಳು ಡಿಪಾರ್ಟ್‌ಮೆಂಟ್ಸ್ ಇದೆ. ಮತ್ತು ಏಳು ಟ್ರೇಡ್ಸ್ ಇವೆ. ಏಳು ಟ್ರೇಡ್ಸ್ ಅಂದರೆ 14 ಲಕ್ಷ ಆಗುತ್ತದೆ. 151 ಐ.ಟಿ.ಐ.ಗೆ 14 ಲಕ್ಷದ ಪ್ರಕಾರ 21 ಕೋಟಿ ರೂಪಾಯಿಗಳು ಆಗುತ್ತದೆ. ಯಾವ ರೀತಿ ಮಾಡಬೇಕೆಂಬುದಕ್ಕೆ ಶ್ರೀ ದೇಶಪಾಂಡೆಯವರು ಮತ್ತು ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ ಒಂದು ಮೀಟಿಂಗ್ ಕರೆಯಿಸಿ ಈ ಸಮಸ್ಯೆಗೆ ಪರಿಹಾರ ಇದೆ. ಇದನ್ನು ಅವರೊಡನೆ ಮತ್ತು ಸರ್ಕಾರದೊಡನೆ ಚರ್ಚೆ ಮಾಡುತ್ತೇನೆ.

## ಗಮನ ಸೆಳೆಯುವ ಸೂಚನೆಗಳು

### ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆಯಾಗದೆ ಕೆಲಸ ಕಾರ್ಯಗಳು ಸ್ಥಗಿತ.

† ಶ್ರೀ ಶಿವಶೇಖರಪ್ಪಗೌಡ ಶಿರವಾಳ (ಶಹಪುರ):– ಮಾನ್ಯ ಅಧ್ಯಕ್ಷರೆ ''ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಸರ್ಕಾರವು 65 ಕೋಟಿ ರೂಪಾಯಿಗಳನ್ನು ನಿಗದಿಗೊಳಿಸಿದ್ದರೂ ಸಹ ಹಣ ಬಿಡುಗಡೆಯಾಗದೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವ ಬಗ್ಗೆ'' ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಶ್ರೀರಂಗದೇವರಾಯಲು (ಮಾನ್ಯ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೇ, ಹೋದ ಫೆಬ್ರುವರಿಗೆ ಕರ್ನಾಟಕ ಸರ್ಕಾರ ಎಚ್.ಕೆ.ಡಿ.ಬಿ.ಗೆ 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತ್ತು ಈ ಫೆಬ್ರುವರಿಯಲ್ಲಿ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಈ